# 'ಕನ್ನಡ ಅಸ್ಮಿತೆಗಾಗಿ ಅಲಯನ್ಸ್ ವಿವಿ ತಿಂಗಳ ಪೂರ್ತಿ ಕಾರ್ಯಕ್ರಮ'

ಆನೇಕಲ್: 'ಕನ್ನಡ ಕಲಿಸಿ ನಾಡು ನುಡಿ ಉಳಿಸಿ' ಧ್ಯೇಯ ವಾಕ್ಯದೊಂದಿಗೆ ಅಲಯನ್ಸ್ ವಿಶ್ವವಿದ್ಯಾಲಯವು ನವೆಂಬರ್ ತಿಂಗಳು ಪೂರ್ತಿ ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಾಯಿ ಭುವನೇಶ್ವರಿಯ ಸೇವೆ ಮಾಡಲು ಬದ್ಧವಾಗಿದೆ ಎಂದು ಅಲಯನ್ಸ್ ವಿವಿ ಸಹ ಕುಲಾಧಿಪತಿ ಅಜಯ್ ಜಿ.ಚಬ್ಬಿ ಹೇಳಿದರು. ಆನೇಕಲ್‌ನ ಅಲಯನ್ಸ್ ಕ್ಯಾಂಪಸ್‌ನಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿ, ಅಲಯನ್ಸ್ ಆವರಣದಲ್ಲಿ ಲಕ್ಷಾಂತರ ಸಸಿ, ಮರಗಳ ಜೊತೆಗೆ ದೇಶ ವಿದೇಶಗಳ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಸಹಸ್ರಾರು ಕನ್ನಡೇತರರಿದ್ದಾರೆ. ಅವರೆಲ್ಲರಿಗೂ ಪ್ರೀತಿಯಿಂದ ಕನ್ನಡವನ್ನು ಕಲಿಸಿ ಕನ್ನಡದ ಅಸ್ಮಿತೆ, ಸಾರ್ವಭೌಮತೆ ಬಗ್ಗೆ ಅರಿವು ಮೂಡಿಸಿ ಕನ್ನಡ ಮಾತನಾಡಲು ಪ್ರೇರೇಪಿಸುತ್ತೇವೆ ಎಂದರು. ವಿವಿಯ ಬೋಧಕ ಸಿಬ್ಬಂದಿ ಡಾ। ಚಿತ್ರಾಕರ ಹೆಗಡೆ ರಚಿತ ಬಿಗಿನರ್ಸ್ ಫೊರೆನ್ಸಿ ಸೈನ್ಸ್ ಹಾಗೂ ಡಾ। ಶೇಖರ್, ರಾಘವೇಂದ್ರ ವಿರಚಿತ ದ್ವೈತ ಪತ್ತೇದಾರಿ ಕಾದಂಬರಿಯನ್ನು ಬಿಡುಗಡೆ ಮಾಡಲಾಯಿತು. ರಾಜ್ಯೋತ್ಸವ ಅಂಗವಾಗಿ ಶಾಂಭವಿ ತಂಡದಿಂದ ಸಮ್ಮಿಲನ, ಸತ್ಯೇಶ್ ಬೆಳ್ಳೂರು ಮತ್ತು ಡಾ। ಆರತಿ ಅವರಿಂದ ಉಪನ್ಯಾಸ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು. ಸಮ ಕುಲಾಧಿಪತಿ ಡಾ। ಪುನೀತ್ ಕಾರಿಯಪ್ಪ, ಆಡಳಿತ ಮಂಡಳಿಯ ಶೈಲಜಾ ಚಬ್ಬಿ, ಡಾ। ಸುರೇಖ, ಡಾ। ನಿವೇದಿತಾ ಮಿಶ್ರಾ ಇದ್ದರು.



ಆನೇಕಲ್‌ನ ಅಲಯನ್ಸ್ ವಿವಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಡಾ। ಚಿತ್ರಾಕರ ಹೆಗಡೆ ಅವರು ರಚಿಸಿರುವ 'ಪುಸ್ತಕವನ್ನು ಅಜಯ್ ಚಬ್ಬಿ, ಶೈಲಜಾ, ನಿವೇದಿತಾ ಮಿಶ್ರಾ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಕೃತಿ ರಚನೆಕಾರ ಡಾ। ಹೆಗಡೆ, ರಾಘವೇಂದ್ರ, ಡಾ। ಶೇಖರ್ ಮುಂತಾದವರು ಹಾಜರಿದ್ದರು.